SRI. QAMARUL ISLAM : Is it not a fact that wrong replies have been given? Are you going to take action against the officers for giving wrong replies and for misleading the House?

ಶ್ರೀ ವೈಜನಾಥ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಇರ್‌ರೆಗ್ಯುಲಾರಿಟೀಸ್ ಆಗಿದ್ದರೆ ಆಕ್ಷನ್ ತೆಗೆದುಕೊಳ್ಳುತ್ತೇವೆ. ಈಗಾಗಲೇ ಇದರ ಬಗ್ಗೆ ಎನ್‌ಕ್ವೈರಿ ಮಾಡಲು ಹೇಳಿದ್ದೇವೆ.

We will take action against them.

SRI QAMARUL ISLAM : Is it a fact that Gulbarga Corporation has not accepted the proposal of taking over the project because this scheme is defective scheme, hydraulic test has not been done, it is not possible, this scheme has not been as per the agreement? It it a fact that the Corporation has taken a decision in the last meeting that they are not going to accept this scheme or taking over his scheme from the Board which has done a defective scheme?

ಶ್ರೀ ವೈಜನಾಥ್ ಪಾಟೀಲ್ : ಏನೇ ಅವ್ಯವಹಾರಗಳು ಆಗಿದ್ದರೂ ಕೂಡ ಅದರ ಬಗ್ಗೆ ವಿಚಾರಣೆ ನಡೆಸಿ ಅಂಥವರ ವಿರುದ್ಧ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು ; ಈಗ ಪ್ರಶ್ನೋತ್ತರ ವೇಳೆಯು ಮುಗಿದಿದೆ. ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳಿಗೆ ಉತ್ತರವನ್ನು ಸಭೆಯ ಮುಂದಿಡುವರು.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಅಧ್ಯಕ್ಷರೆ, 23ನೇ ತಾರೀಖಿನ ಚುಕ್ಕೆ ಗುರುತಿನ ಪ್ರಶ್ನೆಗಳು ಮತ್ತು 24-3-95ರ ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರವನ್ನು ಸಭೆಯ ಮುಂದೆ ಮಂಡಿಸುತ್ತಾ ಇದ್ದೇನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿನ ಮೂಲಕ ನೀಡಲಾದ ಉತ್ತರಗಳು

ಪಟ್ಟಣದ ಕೊಳಚೆ ನಿರ್ಮೂಲನ ಕುರಿತು

360 - ಶ್ರೀ ಬಿ.ಬಿ. ಬಿಮ್ಮನಕಟ್ಟಿ (ಬಾದಾಮಿ ಕ್ಷೇತ್ರ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಪ್ರವಾಸಿ ಕೇಂದ್ರವಾದ ಬಾದಾಮಿಯಲ್ಲಿ ಕೊಳಚೆ ನಿರ್ಮೂಲನೆಗಾಗಿ ಹಾಗೂ ಕೊಳಚೆ ನಿವಾಸಿಗಳ ಅಭಿವೃದ್ಧಿಗಾಗಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಆ) *ಸದರಿ ಸ್ಥಳದಲ್ಲಿ ರಸ್ತೆ ಮೇಲೆ ಕೊಳಚೆ ನೀರು ಹರಿದು ವಾತಾವರಣ ಕಲ್ಮಶವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?*

ಇ) *ಹಾಗಿದ್ದಲ್ಲಿ ಇದನ್ನು ಸರಿಪಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?*

ಶ್ರೀ ವೈಜನಾಥ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಮಂಡಳಿಯಿಂದ ಬಾದಾಮಿ ಪಟ್ಟಣದಲ್ಲಿ ಹತ್ತು ಕೊಳಚೆ ಪ್ರದೇಶಗಳನ್ನು ಗುರುತಿಸಲಾಗಿದ್ದು ಅವುಗಳನ್ನು ಮಂಡಳಿ ಕಾಯ್ದೆ ಕಲಂ (3)ರಂತೆ ಘೋಷಿಸಬೇಕಾಗಿರುತ್ತದೆ.

ಆ) ಇಲ್ಲ

ಇ) ಕೊಳಚೆ ಪ್ರದೇಶವೆಂದು ಘೋಷಿಸಿದ ತರುವಾಯ ಕಾಯ್ದೆಯ ಪ್ರಕಾರ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.